ಸಿ.ಸಿ. **1620/2021**

ಪಿ.ಡಬ್ಲ್ಯೂ-1

ದಿನಾಕಃ 16.05.2024 ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಸ್.ಎಮ್.ಕೆ ವಕೀಲರಿಂದಃ**

ಆರೋಪಿ ಮತ್ತು ನಾನು ಒಂದೇ ಊರಿನವರಾದ ಕಾರಣ ಪರಿಚಯ. ನನಗೂ ಆರೋಪಿಗೂ ಸುಮಾರು 10 ವರ್ಷದಿಂದ ಪರಿಚಯ. ನಾನು ಎಸ್.ಎಸ್.ಎಲ್.ಸಿ ವರೆಗೂ ವಿದ್ಯಾಭ್ಯಾಸ ಮಾಡಿರುತ್ತೇನೆ. ಆರೋಪಿ ಏನು ವಿದ್ಯಾಭ್ಯಾಸ ಮಾಡಿರುತ್ತಾರೆಂದರೆ ಗೊತ್ತಿಲ್ಲ. ಈ ಪ್ರಕರಣವನ್ನು ಆರೋಪಿ ನನ್ನ ಬಳಿ 2 ಲಕ್ಷ ಹಣ ಪಡೆದ ಕಾರಣ ಹೂಡಿರುತ್ತೇನೆ. ನಿಮಗೆ ಕನ್ನಡ ಮತ್ತು ಇಂಗ್ಲೀಷ ಓದಲು ಬರೆಯಲು ಬರುತ್ತದೆಯೇ ಎಂದರೆ ಸಾಕ್ಷಿ ಕನ್ನಡ ಬರುತ್ತದೆಂದು ನುಡಿಯುತ್ತಾರೆ. ಈ ಪ್ರಕರಣವನ್ನು ಹೂಡಲು ಮಾಹಿತಿಯನ್ನು ಯಾರೂ ನೀಡಿರುತ್ತಾರೆಂದು ನನಗೆ ಗೊತ್ತಿಲ್ಲ ಎಂದರೆ ಸರಿ. ನನಗೂ ಮತ್ತು ಆರೋಪಿಗೂ ಸುಮಾರು 5 ವರ್ಷದಿಂದ ಹಣಕಾಸಿನ ವ್ಯವಹಾರ ಇರುತ್ತದೆ. ಈ ಪ್ರಕರಣದಲ್ಲಿರುವ ಹಣಕಾಸಿನ ವ್ಯವಹಾರದ ಮೊದಲು ನನಗೂ ಆರೋಪಿಗೂ ಯಾವುದೇ ಹಣಕಾಸಿನ ವ್ಯವಹಾರ ನಡೆದಿರುವುದಿಲ್ಲ. ಮುಂದುವರೆದು ಇದೇ ಮೊದಲನೇ ವ್ಯವಹಾರ ಎಂದು ನುಡಿಯುತ್ತಾರೆ. ನನಗೂ ಮತ್ತು ಆರೋಪಿಗೂ ಯಾವುದೇ ಹಣಕಾಸಿನ ವ್ಯವಹಾರ ನಡೆದಿರುವುದಿಲ್ಲ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಆರೋಪಿ ನನ್ನ ಬಳಿ 2021 6 ನೇ ತಿಂಗಳಿನಲ್ಲಿ ಹಣವನ್ನು ಕೇಳಿರುತ್ತಾರೆ. ಆರೋಪಿ ಯಾವ ಉದ್ದೇಶಕ್ಕಾಗಿ ಹಣವನ್ನು ಕೇಳಿರುತ್ತಾರೆಂದರೆ ಸಾಕ್ಷಿ ತಮ್ಮ ಮದುವೆ ಮತ್ತು ಸಾಲ ತೀರಿಸಲು ಎಂದು ನುಡಿಯುತ್ತಾರೆ. ಆರೋಪಿ ಹಣ ಕೇಳಿ ಒಂದು ವಾರದ ನಂತರ ಹಣವನ್ನು ನೀಡಿರುತ್ತೇನೆ. ಆರೋಪಿ ನನ್ನ ಬಳಿ ಯಾವುದೇ ಹಣ ಕೇಳಿಲ್ಲ ಹಾಗೂ ನಾನು ನೀಡಿರುವುದಿಲ್ಲ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ನೀಡಲಾಯಿತು.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ
ನ್ಯಾಯಾಧೀಶರು, ಹುಣಸೂರು